ಮೂಲ ದಾವಾ ನಂಃ 112/2023

ಪಿ ಡಬ್ಲುಃ 01

ಸಾಕ್ಷಿಯನ್ನು ದಿನಾಂಕಃ **06.03.2026.** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಆರ್.ಎಸ್.ಹೆಚ್., ಪ್ರತಿವಾದಿಯರ ಪರ ವಕೀಲರಿಂದಃ**

ನನ್ನ ಪ್ರಕಾರ ದಾವಾಸ್ತಿಗಳು ಎಂದರೆ, ಸರ್ವೇ ನಂಬರ್ 19 ಮತ್ತು 154 ಆಗಿರುತ್ತವೆ. ಸರ್ವೇ ನಂಬರ್ 154 ಇಂದೂರು ಗ್ರಾಮದಲ್ಲಿದೆ. ಸರ್ವೇ ನಂಬರ್ 154 ರ ಕ್ಷೇತ್ರ 2 ಎಕರೆ 19 ಗುಂಟೆ ಮತ್ತು ಸರ್ವೇ ನಂಬರ್ 19 ರ ಕ್ಷೇತ್ರ 1 ಎಕರೆ 19 ಗುಂಟೆ ದಾವಾಸ್ತಿಗಳಾಗಿರುತ್ತವೆ. ಸರ್ವೇ ನಂಬರ್ 154 ರ ಕ್ಷೇತ್ರ 2 ಎಕರೆ 19 ಗುಂಟೆ ಮೂಲತಃ ನಮ್ಮ ಮಾವನವರಾದ ಅಣ್ಣಪ್ಪ ಕುಂಬಾರ ಇವರಿಗೆ ಸೇರಿದ ಆಸ್ತಿಯಾಗಿರುತ್ತದೆ. ಸದರಿ ಆಸ್ತಿಯ ಬಗ್ಗೆ ನಾನು ವಾದಪತ್ರದಲ್ಲಿ ನಮೂದಿಸಿದ್ದು ಇರುವುದಿಲ್ಲ. ನಾನು ವಾದಪತ್ರದಲ್ಲಿ ಕೊಪ್ಪ ಗ್ರಾಮದ ಸರ್ವೇ ನಂಬರ್ 19 ರ ಕ್ಷೇತ್ರ 1 ಎಕರೆ 13 ಗುಂಟೆಯ ಬಗ್ಗೆ ನಮೂದು ಮಾಡಿರುತ್ತೇನೆ. ನಾನು ನನ್ನ ವಾದಪತ್ರದ 4 ನೇ ಪ್ಯಾರಾದ ಕೊನೆಯ ಸಾಲಿನಲ್ಲಿ ನಮ್ಮ ಮಾವನವರ ಇಚ್ಛೆಯನ್ನು ಪ್ರತಿವಾದಿಯರಾಗಲೀ ಹಾಗೂ ಇನ್ಯಾರಿಗೂ ಪ್ರಶ್ನಿಸಲು ಯಾವುದೇ ಹಕ್ಕು ಇರುವುದಿಲ್ಲ ಎಂದು ನಮೂದು ಮಾಡಿದ್ದು, ಪ್ರತಿವಾದಿಯರನ್ನು ಹೊರತುಪಡಿಸಿ, ಇನ್ನುಳಿದವರು ಯಾರು ಎಂದರೆ, ಸಾಕ್ಷಿಯು ಪ್ರತಿವಾದಿಯರೇ ಎಂದು ನುಡಿಯುತ್ತಾರೆ. ಇನ್ಯಾರಿಗೂ ಎನ್ನುವ ಪದದಲ್ಲಿ ನಾನು ಮತ್ತು ನನ್ನ ಗಂಡ ಸಹ ಸೇರ್ಪಡೆಯಾಗುತ್ತೇವೆ ಎಂದರೆ ಸರಿಯಲ್ಲ. ನಾನು ದಾವಾಸ್ತಿಯ ಈಗಿನ ಪಹಣಿ ಪತ್ರಿಕೆಯನ್ನು ನೋಡಿರುತ್ತೇನೆ. ಸಾಕ್ಷಿಗೆ ನಿಪಿ.2 ನ್ನು ತೋರಿಸಿ, ಕೇಳಲಾಗಿ ಸದರಿ ಪಹಣಿ ಪತ್ರಿಕೆಯನ್ನು ಗುರುತಿಸುತ್ತಾರೆ. ದಾವಾಸ್ತಿಯ ಪಹಣಿಯಲ್ಲಿ ಪ್ರತಿವಾದಿಯರ ಹೆಸರು ಜಂಟಿಯಾಗಿದೆ ಎಂದರೆ ಸರಿಯಲ್ಲ. ನಮ್ಮ ಮಾವ ತೀರಿಕೊಂಡ ನಂತರ, ಪ್ರತಿವಾದಿಯರ ಹೆಸರು ವಾರಿಸಾ ಪ್ರಕಾರ ದಾಖಲಾತಿಗಳಲ್ಲಿ ನಮೂದಾಗಿ ಬಂದಿದೆ ಎಂದರೆ ಸರಿ. ನಾನು ವಾದಪತ್ರದಲ್ಲಿ ಯಾವ ದಾಖಲಾತಿ ಎಂದು ನಮೂದು ಮಾಡಿರುತ್ತೇನೆ ಎಂದರೆ, ಮರಣ ಶಾಸನ ಎಂದು ನಮೂದು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ನನ್ನ ವಾದಪತ್ರದಲ್ಲಿ ಸದರಿ ದಾಖಲಾತಿ ನನಗೆ ಹೇಗೆ ಲಭ್ಯವಾಯಿತು ಎನ್ನುವ ಬಗ್ಗೆ ನಮೂದು ಮಾಡಿದ್ದು ಇರುವುದಿಲ್ಲ. ನಮ್ಮ ಮಾವನವರು ತೀರಿಕೊಂಡ ನಂತರ, ಮನೆಯನ್ನು ಸ್ವಚ್ಛ ಮಾಡುವ ಕಾಲಕ್ಕೆ ಸದರಿ ದಾಖಲಾತಿ ಸಿಕ್ಕಿರುತ್ತದೆ. ಸದರಿ ವಿಷಯವನ್ನು ನಾನು ನನ್ನ ವಾದಪತ್ರದಲ್ಲಿ ಬರೆಸಿದ್ದು ಇರುವುದಿಲ್ಲ. 1 ರಿಂದ 3 ಮತ್ತು 5 ಮತ್ತು 6 ನೇ ಪ್ರತಿವಾದಿಯರಿಗೆ ಮೋಸ ಮಾಡುವ ಉದ್ದೇಶದಿಂದ ನಾನು ಸದರಿ ದಾಖಲಾತಿಯನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು, ನಮಗೆ ವಿಲ್ ಮಾಡಿದ ವರ್ಷವೇ ನಮ್ಮ ಮಾವನವರು 5 ನೇ ಪ್ರತಿವಾದಿಯ ಹೆಸರಿಗೆ ವಿಲ್ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ವಾರಿಸಾ ದಾಖಲು ಮಾಡುವ ಸಲುವಾಗಿ ಸಲ್ಲಿಸಿದ ಅರ್ಜಿಗೆ ತಕರಾರರನ್ನು ಸಲ್ಲಿಸಲು ನಾನು ಎಷ್ಟು ಬಾರಿ ಹೋಗಿದ್ದೆನು ಎಂದರೆ, ಎರಡು ಬಾರಿ ಹೋಗಿದ್ದೆನು, ಆದರೆ ದಿನಾಂಕ ನೆನಪಿಲ್ಲ. ಮರಣ ಶಾಸನದ ಪ್ರಕಾರ ಹೆಸರನ್ನು ದಾಖಲು ಮಾಡುವಂತೆ ತಕರಾರನ್ನು ಸಲ್ಲಿಸಿದ್ದೆನು. ಹೀಗೆ ತಕರಾರನ್ನು ಸಲ್ಲಿಸುವ ಪೂರ್ವದಲ್ಲಿ ವಿಲ್ ಬಗ್ಗೆ ನಾನು ಯಾರೊಂದಿಗಾದರೂ ಚರ್ಚೆ ಮಾಡಿರುತ್ತೇನೆಯೇ ಎಂದರೆ ಇಲ್ಲ. ನಾನು ತಕರಾರು ಸಲ್ಲಿಸಿದ ನಂತರ, ವಾರಿಸಾ ಅರ್ಜಿಯನ್ನು ರದ್ದು ಪಡಿಸಿರುತ್ತಾರೆ ಎಂದರೆ, ನ್ಯಾಯಾಲಯದಲ್ಲಿ ದಾವೆ ಇದ್ದ ಕಾರಣ, ರದ್ದುಪಡಿಸಿರುತ್ತಾರೆ ಎಂದು ನುಡಿಯುತ್ತಾರೆ. ತದನಂತರ, 1 ರಿಂದ 3, 5 ಮತ್ತು 6 ನೇ ಪ್ರತಿವಾದಿಯರು 4 ನೇ ಪ್ರತಿವಾದಿಯನ್ನೂ ಸಹ ಸೇರಿಸಿ, ತಮ್ಮನ್ನು ಮೃತ ಅಣ್ಣಪ್ಪ ಬಸಪ್ಪ ಅವರ ವಾರಿಸುದಾರರೆಂದು ಘೋಷಿಸಬೇಕೆಂದು ಇದೇ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 01/2022 ನ್ನು ದಾಖಲಿಸಿರುತ್ತಾರೆ ಎಂದರೆ ಸರಿ. ಸದರಿ ದಾವೆ ಡಿಕ್ರಿಯಾಗಿರುತ್ತದೆ ಎಂದರೆ ನನಗೆ ನೆನಪಿಲ್ಲ. ಆದ ಕಾರಣ 1 ರಿಂದ 6 ನೇ ಪ್ರತಿವಾದಿಯರೆಲ್ಲರೂ ಅಣ್ಣಪ್ಪರವರ ಆಸ್ತಿಗಳಿಗೆ ಹಕ್ಕುದಾರರೆಂದರೆ ಸರಿಯಲ್ಲ. ಸದರಿ

ಡಿಕ್ರಿಯನ್ನು ಹಾಜರುಪಡಿಸಿ, ಪ್ರತಿವಾದಿಯರು ಅವರ ವಾರಿಸುದಾರರೆಂದು ನಮೂದು ಮಾಡುವಂತೆ ಮತ್ತೆ ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ನನಗೆ ನೆನಪಿಲ್ಲ. ಸದರಿ ಅರ್ಜಿಗೆ ನಾನು ನನ್ನ ವಕೀಲರ ಮುಖಾಂತರ ಮತ್ತೆ ತಕರಾರನ್ನು ಸಲ್ಲಿಸಿದ್ದೆನು ಎಂದರೆ ನನಗೆ ನೆನಪಿಲ್ಲ. ಸದರಿ ತಕರಾರನ್ನು ವಿಚಾರಣೆಗೆ ಒಳಪಡಿಸಿ ಆರ್.ಆರ್.ಟಿ ಪ್ರಕರಣವೂ ಸಹ ಜರುಗಿತ್ತು ಎಂದರೆ ಹೌದು. ಕಂದಾಯ ನ್ಯಾಯಾಲಯ ವಿಚಾರಣೆಯನ್ನು ನಡೆಸಿ , ಪ್ರತಿವಾದಿಯರು ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸಿರುತ್ತದೆ ಎಂದರೆ, ಸಿವಿಲ್ ನ್ಯಾಯಾಲಯದಲ್ಲಿ ದಾವೆ ನಡೆದಿದ್ದ ಕಾರಣ, ಅವರ ಅರ್ಜಿಯನ್ನು ತಿರಸ್ಕರಿಸಿರುತ್ತಾರೆ ಎಂದು ನುಡಿಯುತ್ತಾರೆ.

ಸದರಿ ಆದೇಶವನ್ನು ಪ್ರತಿವಾದಿಯರು ಸಹಾಯಕ ಕಮೀಷನರ್ ಶಿರಸಿ ಇವರ ಬಳಿ ಪ್ರಶ್ನಿಸಿರುತ್ತಾರೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನನ್ನ ವಕೀಲರ ಮೂಲಕ ಹಾಜರಾಗಿ ತಕರಾರನ್ನು ಸಲ್ಲಿಸಿರುತ್ತೇನೆ ಎಂದರೆ ಹೌದು. ಸದರಿ ಪ್ರಕರಣದಲ್ಲಿ ಸಹಾಯಕ ಕಮೀಷನರವರು ಮೇಲ್ಮನವಿಯನ್ನು ಪುರಸ್ಕರಿಸಿ, ತಹಶೀಲ್ದಾರ ಮುಂಡಗೋಡರವರು ಹೊರಡಿಸಿದ ಆದೇಶವನ್ನು ರದ್ದುಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು, ದಾವೆ ಸಿವಿಲ್ ನ್ಯಾಯಾಲಯದಲ್ಲಿ ಬಾಕಿ ಇದ್ದ ಕಾರಣ, ಅಲ್ಲೇ ಇತ್ಯರ್ಥಪಡಿಸಿಕೊಳ್ಳಿ ಎಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಸಹಾಯಕ ಕಮೀಷನರವರು ಹೊರಡಿಸಿದ ಆದೇಶದ ವಿರುದ್ಧ ನಾನು ಮಾನ್ಯ ಜಿಲ್ಲಾಧಿಕಾರಿಯವರಲ್ಲಿ ರಿವಿಸನ್ ಪಿಟೀಷನ್ ಸಲ್ಲಿಸಿರುತ್ತೇನೆ ಎಂದರೆ ಹೌದು. ಅದಕ್ಕಿಂತ ಪೂರ್ವದಲ್ಲಿ ಪ್ರತಿವಾದಿಯರ ಹೆಸರು ಅಣ್ಣಪ್ಪ ಕುಂಬಾರ ಎಂಬ ವಾರಿಸುದಾರರ ಹೆಸರು ದಾಖಲಾತಿಗಳಲ್ಲಿ ನಮೂದು ಮಾಡಲಾಯಿತು ಎಂದರೆ ನನಗೆ ನೆನಪಿಲ್ಲ. ಮಾನ್ಯ ಜಿಲ್ಲಾಧಿಕಾರಿಯವರೂ ಸಹ ಸಹಾಯಕ ಕಮೀಷನರವರು ಹೊರಡಿಸಿದ ಆದೇಶವನ್ನು ಎತ್ತಿ ಹಿಡಿದು, ನಾನು ಸಲ್ಲಿಸಿದ ರಿವಿಸನ್ ಪಿಟೀಷನ್ ನ್ನು ತಿರಸ್ಕರಿಸಿದರು ಎಂದರೆ ಸರಿಯಲ್ಲ. ಸದರಿ ಆದೇಶವನ್ನು ನಾನು ಮತ್ತೆ ಪ್ರಶ್ನಿಸಿದ್ದು ಇರುವುದಿಲ್ಲ ಎಂದರೆ ಸರಿ. ಸಿವಿಲ್ ನ್ಯಾಯಾಲಯದಲ್ಲಿ ಹಾಕಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಅಣ್ಣಪ್ಪ ಕುಂಬಾರವರು ತೀರಿಕೊಂಡ ನಂತರ, ಪ್ರತಿವಾದಿಯರು ದಾವಾಸ್ತಿಯನ್ನು ಜಂಟಿಯಾಗಿ ಕಬ್ಜೆ ವೈವಾಟಿನಲ್ಲಿ ಬಂದಿರುತ್ತಾರೆ ಎಂದರೆ ಸರಿಯಲ್ಲ. ಹೇಗಾದರೂ ಮಾಡಿ 1 ರಿಂದ 3, 5 ಮತ್ತು 6 ನೇ ಪ್ರತಿವಾದಿಯರನ್ನು ದಾವಾಸ್ತಿಯಿಂದ ಹೊರಗೆ ಹಾಕಬೇಕೆಂದು ಮತ್ತು ಅವರ ಕಬ್ಜೆ ವಹಿವಾಟವನ್ನು ತಪ್ಪಿಸಬೇಕೆಂದು ಈ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ಈ ದಾವೆಯ ಜೊತೆಗೆ 1 ರಿಂದ 3 , 5 ಮತ್ತು 6 ನೇ ಪ್ರತಿವಾದಿಯರ ವಿರುದ್ಧ ಕ್ರಿಮಿನಲ್ ಪ್ರಕರಣವನ್ನೂ ಸಹ ದಾಖಲಿಸಿರುತ್ತೇನೆ ಎಂದರೆ, ಈ ದಾವೆಯ ಜೊತೆಗೆ ದಾಖಲು ಮಾಡಿದ್ದು ಇರುವುದಿಲ್ಲ ಎಂದು ನುಡಿಯುತ್ತಾರೆ. ಎರಡು ಪ್ರಕರಣಗಳನ್ನು 2023 ನೇ ಸಾಲಿನಲ್ಲೇ ದಾಖಲು ಮಾಡಲಾಗಿದೆ ಎಂದರೆ, ಸಾಕ್ಷಿಯು ಎರಡು ಪ್ರಕರಣಕ್ಕೂ 2-3 ತಿಂಗಳು ವ್ಯತ್ಯಾಸವಿದೆ ಎಂದು ನುಡಿಯುತ್ತಾರೆ. ಮಾನ್ಯ ಜಿಲ್ಲಾಧಿಕಾರಿಯವರ ಆದೇಶವನ್ನು ಪ್ರಶ್ನಿಸಲಾಗದೇ ಮತ್ತು ಪ್ರತಿವಾದಿಯರ ಕಬ್ಜೆಯೂ ಸಹ ತಪ್ಪಿಸಲಾಗದೇ ನಾನು ಅವರ ವಿರುದ್ಧ ಸುಳ್ಳು ಕ್ರಿಮಿನಲ್ ಪ್ರಕರಣವನ್ನು ದಾಖಲು ಮಾಡಿರುತ್ತೇನೆ ಎಂದರೆ ಸುಳ್ಳು. ನಾನು ಪ್ರತಿವಾದಿಯರ ವಿರುದ್ಧ ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣಗಳನ್ನು ದಾಖಲು ಮಾಡುವ ಪೂರ್ವದಲ್ಲೇ ಪ್ರತಿವಾದಿಯರು ಕುಟುಂಬದ ಆಸ್ತಿಗಳಿಗೆ ಸಂಬಂಧಿಸಿದಂತೆ ಹಿಸ್ಸಾ ವಾಂಟಣಿ ದಾವೆಯನ್ನು ದಾಖಲು ಮಾಡಿದ್ದರು ಎಂದರೆ, ನನಗೆ ನೆನಪಿಲ್ಲ. ಸದರಿ ಅಸಲು ದಾವಾ ಸಂಖ್ಯೆ 15/2022 ರಲ್ಲಿ ನಾನು ಮತ್ತು ನನ್ನ ಗಂಡ ವಕೀಲರ ಮುಖಾಂತರ ಹಾಜರಾಗಿ ತಕರಾರನ್ನೂ ಸಹ ಸಲ್ಲಿಸಿರುತ್ತೇವೆ ಎಂದರೆ ಹೌದು. ಪ್ರತಿವಾದಿಯರು ಅಸಲು ದಾವಾ ಸಂಖ್ಯೆ 15/2022 ರಿಂದ ಹಿಂದೆ ಸರಿಯಬೇಕೆಂದು ಈ ಪ್ರಸ್ತುತ ದಾವೆಯನ್ನು ಹುಟ್ಟು ಹಾಕಿರುತ್ತೇನೆ ಎಂದರೆ ಸುಳ್ಳು.

ಮರಣ ಶಾಸನವನ್ನು ನಮ್ಮ ಹೆಸರಿಗೆ ಮಾಡಿಕೊಡುವಂತೆ, ನಾನು ಈ ದಾವೆಯಲ್ಲಿ ಪ್ರಾರ್ಥಿಸಿರುತ್ತೇನೆ. ನಾನು ಎಷ್ಟು ಪುಟಗಳ ಮರಣ ಶಾಸನವನ್ನು ಮಾಡಿಕೊಂಡಿರುತ್ತೇನೆ ಎಂದು ನೆನಪಿಲ್ಲ. ನಾನು ಮಾಡಿಕೊಂಡಿದ್ದು ಇರುವುದಿಲ್ಲ ಎಂದು ನುಡಿಯುತ್ತಾರೆ. ನಾನೇ ಸದರಿ ಮರಣ ಶಾಸನವನ್ನು ಹುಟ್ಟಿ ಹಾಕಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ

ಅಣ್ಣಪ್ಪ ಕುಂಬಾರವರಿಗೆ ತಮ್ಮ ಜೀವಿತಾ ಅವಧಿಯಲ್ಲಿ ಮರಣ ಶಾಸನವನ್ನು ಮಾಡುವ ಪ್ರಮೆಯೇ ಬಂದಿರುವುದಿಲ್ಲ ಎಂದರೆ, ಅವರ ಇಚ್ಚೆಯಂತೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಅಣ್ಣಪ್ಪರವರು ತೀರಿಕೊಂಡ ನಂತರ, ಪ್ರತಿವಾದಿಯರ ಹೆಸರು ವಾರಿಸಾ ಪ್ರಕಾರ ದಾಖಲಾತಿಗಳಲ್ಲಿ ನಮೂದಾಗಬಹುದೆಂದು ನನಗೆ ತಿಳಿದಿತ್ತು ಎಂದರೆ ಇಲ್ಲ. ಅಣ್ಣಪ್ಪರವರು ತಮ್ಮ ಜೀವಿತಾವಧಿಯಲ್ಲಿ ಅನಾರೋಗ್ಯದಿಂದ ಬಳಳುತ್ತಿದ್ದರು, ಅವರನ್ನು ಕೀಮ್ಸ ಆಸ್ಪತ್ರೆಯಲ್ಲಿ ದಾಖಲು ಮಾಡಲಾಗಿತ್ತು ಎಂದರೆ ಸುಳ್ಳು, ಅವರು ಆರೋಗ್ಯವಾಗಿದ್ದರು ಎಂದು ನುಡಿಯುತ್ತಾರೆ. ಅವರಿಗೆ ಕಣ್ಣು ಕಾಣಿಸುತ್ತಿರಲಿಲ್ಲ, ಅವರಿಗೆ ನಡೆಯಲಾಗುತ್ತಿರಲಿಲ್ಲ , ಅವರು ಹಾಸಿಗೆ ಹಿಡಿದಿದ್ದರು ಎಂದರೆ, ಅವರು ಆರೋಗ್ಯವಾಗಿದ್ದರು ಎಂದು ನುಡಿಯುತ್ತಾರೆ. ಅವರಿಗೆ ತಮ್ಮ ಸಹಿಯನ್ನೂ ಸಹ ಮಾಡಲು ಬರುತ್ತಿರಲಿಲ್ಲ ಎಂದರೆ, ಮಾಡುತ್ತಿದ್ದರು ಎಂದು ನುಡಿಯುತ್ತಾರೆ.

**(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿಯರ ಪರ ವಕೀಲರು ಸಮಯವಕಾಶ ಕೇಳಿದ್ದು ಸಮಯವಕಾಶ ನೀಡಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)**

ಓ ಹೆ ಕೇ ಸರಿ ಇದೆ.

**Sd/-**

**ಪ್ರ ದ ನ್ಯಾದಂ ಮುಂಡಗೋಡ.**